ಗಾಂಧಿ- ಅಂಬೇಡ್ಕರ್‌ರವರ ಸಂಬಂಧವನ್ನು ಅನ್ವೇಷಿಸುವುದು ಅತ್ಯಂತ ಸವಾಲಿನ ವಿಷಯಗಳಲ್ಲಿ ಒಂದಾಗಿದೆ. ಗಾಂಧಿಯವರೆಡೆಗಿರುವ ದಲಿತ ಚಳವಳಿಯ ಪ್ರಧಾನ ವರ್ಗವೊಂದರ ದ್ವೇಷವು ಈ ವಿಷಯವನ್ನು ಯಾವುದೇ ಆಳಕ್ಕೆ ಅನ್ವೇಷಿಸಲು ಸಹಾಯ ಮಾಡಿಲ್ಲ. ಕೆಲವೊಮ್ಮೆ, ಸರಳವಾದ ಸೂತ್ರೀಕರಣಗಳನ್ನು ಅವಲಂಬಿಸುವ ಮೂಲಕ, ಗಾಂಧಿ ಮತ್ತು ಅಂಬೇಡ್ಕರ್‌ರವರ ಬಗ್ಗೆ ಸಹಾನುಭೂತಿ ಹೊಂದಿರುವವರು ಕೂಡ ಈ ಸಂಬಂಧದ ಸಂಕೀರ್ಣತೆಯನ್ನು ಅರ್ಥ ಮಾಡಿಕೊಳ್ಳಲು ನಮಗೆ ಸಹಾಯ ಮಾಡಿಲ್ಲ. ಉದಾಹರಣೆಗೆ, ಕನ್ನಡ ಸಾಹಿತ್ಯದಲ್ಲಿ, ಡಿ.ಆರ್. ನಾಗರಾಜ್ ಈ ಸಂಬಂಧವನ್ನು ಬೈನರಿ ವಿರೋಧವಾಗಿ ನಿಶ್ಚಯಿಸಿಬಿಟ್ಟಿದ್ದಾರೆ.

ಗಾಂಧಿಯವರ ಬಗ್ಗೆ, ವಿಶೇಷವಾಗಿ ಅಸ್ಪೃಶ್ಯತಾ ಪ್ರಶ್ನೆಯ ಕುರಿತ ಅವರ ವಿಧಾನದ ಬಗ್ಗೆ, ಅಂಬೇಡ್ಕರ್‌ರವರು ಬಹಳಷ್ಟು ಬರೆದಿದ್ದಾರೆ. ಅವರ ಪ್ರಮುಖ ಕೃತಿ 'ವಾಟ್ ಕಾಂಗ್ರೆಸ್ ಅಂಡ್ ಗಾಂಧಿ ಹ್ಯಾವ್ ಡನ್ ಟು ದಿ ಅನ್‌ಟಚಬಲ್ಸ್' (1946) ಇದಕ್ಕೆ ಸಾಕ್ಷಿಯಾಗಿದೆ. ಈ ಅಧ್ಯಯನವು ಗಾಂಧಿಯವರ ರಾಜಕೀಯ ಹಸ್ತಕ್ಷೇಪಗಳು ಮತ್ತು ಅವುಗಳ ಹಿಂದಿನ ಚಿಂತನೆಯನ್ನು ಅಂಬೇಡ್ಕರ್‌ರವರು ಎಷ್ಟು ನಿಕಟವಾಗಿ ಅನುಸರಿಸಿದ್ದಾರೆ ಎಂಬುದನ್ನು ತೋರಿಸಿಕೊಡುತ್ತದೆ. ತುಲನಾತ್ಮಕವಾಗಿ ನೋಡಿದಾಗ ಅಂಬೇಡ್ಕರ್‌ರವರ ಬರಹಗಳು ಮತ್ತು ರಾಜಕೀಯ ನಿಲುವುಗಳ ಕುರಿತು ಗಾಂಧಿಯವರ ನೇರ ಕಾಮೆಂಟ್‌ಗಳು ಕಡಿಮೆ. ಇರುವುದೆಲ್ಲವೂ ದುಂಡು ಮೇಜಿನ ಸಮ್ಮೇಳನಗಳಲ್ಲಿನ ಚರ್ಚೆ, ಪೂನಾ ಒಪ್ಪಂದ ಮತ್ತು 'ಅನಿಹಿಲೇಶನ್ ಆಫ್ ಕಾಸ್ಟ್' (1936) ಪ್ರಕಟಣೆಯ ನಂತರ ಮತ ಮತ್ತು ಮತೀಯ ಪಠ್ಯಗಳ ಕುರಿತ ಪ್ರತಿಪಾದನೆ ಬಗ್ಗೆ ಅವರಿಬ್ಬರ ನಡುವಿನ ಚರ್ಚೆ, ಮುಂತಾದ ವಿಷಯಗಳಿಗೆ ಸೀಮಿತವಾಗಿದೆ. ಆದಾಗ್ಯೂ, ಗಾಂಧಿಯವರ ಅನೇಕ ಉಪಕ್ರಮಗಳು ಅಂಬೇಡ್ಕರ್‌ರವರ ನಿಲುವುಗಳೊಂದಿಗೆ ದೃಢವಾಗಿ ಹೆಣೆದುಕೊಂಡಿವೆ ಮತ್ತು ಪ್ರತಿಯಾಗಿ, ಅರ್ಹ ಒಪ್ಪಂದದಿಂದ ಬಲವಾದ ಭಿನ್ನಾಭಿಪ್ರಾಯಗಳವರೆಗೆ ವಿಶಾಲವ್ಯಾಪ್ತಿಯನ್ನು ಒಳಗೊಂಡಿದೆ. ಅವರಿಬ್ಬರನ್ನು ಒಬ್ಬರ ವಿರುದ್ಧ ಒಬ್ಬರು ಎಂಬಂತೆ ತೋರಿಸಲು ಆಸಕ್ತಿ ಹೊಂದಿರುವವರು- ಉದಾಹರಣೆಗೆ, ಅಂಬೇಡ್ಕರ್‌ರವರ 'ಅನಿಹಿಲೇಶನ್ ಆಫ್ ಕಾಸ್ಟ್'ಗೆ 'ದಿ ಡಾಕ್ಟರ್ ಅಂಡ್ ದ ಸೇಂಟ್' ಎಂಬ ಹೆಸರಿನ ಸುದೀರ್ಘ ಪ್ರಸ್ತಾವನೆಯನ್ನು ಬರೆದಂತಹ ಅರುಂಧತಿ ರಾಯ್ – ಸಂಕೀರ್ಣ ಸಂಬಂಧಕ್ಕೆ ತೋರಬೇಕಾದಷ್ಟು ಸೂಕ್ಷ್ಮತೆಯನ್ನು ತೋರಿಸಿಲ್ಲ.

ಈ ವಿಷಯವನ್ನು ಪ್ರವೇಶಿಸಲು ನಾವು 'ಆಧುನಿಕತೆ', 'ಪ್ರತ್ಯೇಕ ಮತದಾರರು', 'ಗ್ರಾಮ ಗಣರಾಜ್ಯಗಳು' ಮುಂತಾದ ಕೆಲವು ಉದ್ಘೋಷಗಳ ಬಗ್ಗೆ ಜಾಗರೂಕರಾಗಿ ಇರಬೇಕಾಗಬಹುದು. ಕೆಲವು ವಿಷಯಗಳಲ್ಲಿ, ಅಂಬೇಡ್ಕರ್ ಮತ್ತು ಗಾಂಧಿಯವರು ಸಾರ್ವಜನಿಕವಾಗಿ ವಿರೋಧ ವ್ಯಕ್ತಪಡಿಸಿದರು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಮುಖ್ಯ:

1. ಅಸ್ಪೃಶ್ಯತೆಯ ಕುರಿತು ವಾದಿಸುತ್ತಾ ಗಾಂಧಿಯವರು ಹಿಂದೂಮತದಲ್ಲಿ ಅದಕ್ಕೆ ಯಾವುದೇ ಆಧಾರವಿಲ್ಲವಾದರೂ, ಅದು ಗಂತಿಯನ್ನು ಬೆಳೆಸುತ್ತದಾದ್ದರಿಂದ ಅದನ್ನು ನಿವಾರಿಸಬೇಕು ಎಂದಿದ್ದರು. ಇದು ಮತದ ಹೆಸರಿನಲ್ಲಿ ಮುಗ್ಧ ಮಾನವರ ಮೇಲಿನ ದಾಳಿಯಾಗಿದೆ. ಸವರ್ಣೀಯರು ಈ ಹೇಯ ಸಾಮಾಜಿಕ ಆಚರಣೆಗೆ ತಿದ್ದುಪಡಿ ಮಾಡಿಕೊಳ್ಳಬೇಕು. ಈ ಪದ್ಧತಿಯನ್ನು ತ್ಯಜಿಸುವ ಮೂಲಕ ಮಾತ್ರ ಹಿಂದೂಮತವು ಆರೋಗ್ಯಕರವಾಗಬಹುದು. ಇದಕ್ಕೆ ಪ್ರತಿಯಾಗಿ ಅಂಬೇಡ್ಕರ್‌ರವರು ವಾದಿಸಿದ್ದೇನೆಂದರೆ, ಹಿಂದೂಗಳು ಅಸ್ಪೃಶ್ಯತಾ ಆಚರಣೆಗಳನ್ನು ಧಾರ್ಮಿಕವಾಗಿ ಅನುಮೋದಿತವೆಂದು ಪರಿಗಣಿಸುತ್ತಾರೆ ಮತ್ತು ಈ ನಿಷೇಧವನ್ನು ಉಲ್ಲಂಘಿಸುವುದಿಲ್ಲ. ಒಂದು ವೇಳೆ ಅವರು ಹಾಗೇನಾದರೂ ಮಾಡಿದರೆ, ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಾರೆ. ಅಸ್ಪೃಶ್ಯತೆಯನ್ನು ಎದುರಿಸಬಹುದಾದ ಏಕೈಕ ಮಾರ್ಗವೆಂದರೆ ಅಸ್ಪೃಶ್ಯರ ಸ್ವಯಂ-ಕಾರ್ಯತತ್ಪರತೆಯ ಆಧಾರದ ಮೇಲೆ ಹಿಂದೂ ಮತದ ಆಮೂಲಾಗ್ರ ಮರುರಚನೆಯಾಗಬೇಕು, ಅಥವಾ ಅಸ್ಪೃಶ್ಯರು ತಮ್ಮನ್ನು ಸಮಾನವಾಗಿ ಸ್ವೀಕರಿಸುವ ಮತ್ತೊಂದು ಮತವನ್ನು ಆರಿಸಿಕೊಳ್ಳಬೇಕು.